# ಧರ್ಮ ಕಾರಣ

ನಾಡಿನ ಹಬ್ಬ ದಸರಾ ಜಾತಿ, ಮತ, ಧರ್ಮಗಳನ್ನು ಮೀರಿದ ಸಾಂಸ್ಕೃತಿಕ ಐಕ್ಯತೆಯನ್ನು ಬಿಂಬಿಸುವ ಚಟುವಟಿಕೆ. ಸಾಮರಸ್ಯದ ಪ್ರತೀಕವಾಗಿರುವ ದಸರಾ ಎಲ್ಲರನ್ನೂ ಒಳಗೊಳ್ಳುತ್ತಾ ನಡೆದುಬರುತ್ತಿದೆ ಎಂಬುದನ್ನು ಚರಿತ್ರೆ ಹೇಳುತ್ತಿದೆ. ಇದರ ಉದ್ಘಾಟನೆಗಾಗಿ ಆಹ್ವಾನಿತರಾಗಿರುವ ಬೂಕರ್ ಪ್ರಶಸ್ತಿ ಪುರಸ್ಕೃತ ಲೇಖಕಿ ಬಾನು ಮುಷ್ತಾಕ್ ಅವರನ್ನು ವಿರೋಧಿಸುತ್ತಿರುವ ಮನಸ್ಸುಗಳು ನಿಜಕ್ಕೂ ಆರೋಗ್ಯಕರವಾಗಿವೆಯೆ? ಈ ಸಂದರ್ಭದಲ್ಲಿ ಬಹಿರಂಗವಾಗಿ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡಿದರೆ ಇಲ್ಲ ಎಂಬ ಉತ್ತರವೇ ದೊರೆಯುತ್ತದೆ. ಹೀಗೆ ವಿರೋಧಿಸುತ್ತಿರುವವರು ಖಂಡಿತ ಬಾನು ಮುಷ್ತಾಕ್ ಅವರ ಕೃತಿಗಳನ್ನು ಓದಿರಲಾರರು! ಒಂದು ವೇಳೆ ಓದಿದ್ದರೆ ಅವರು ತೋರುತ್ತಿರುವ ವಿರೋಧ ಇರುತ್ತಿರಲಿಲ್ಲ! ಅವರ ವಿರೋಧವೆಲ್ಲ ಲೇಖಕಿಯ ಧರ್ಮ ಮತ್ತು ಅವರ ವೈಯಕ್ತಿಕ ನಂಬಿಕೆಗೆ ಸಂಬಂಧಪಟ್ಟವಾಗಿವೆ. ಇದೆಲ್ಲಾ ಸಲ್ಲದ ಮಾತು. ಜಾತಿ ಮತ್ತು ಪರಮತ ದ್ವೇಷದ ಕಲ್ಲುಗಳಿಂದ ಭಾರತದ ಚರಿತ್ರೆಯಲ್ಲಿ ಮುಸ್ಲಿಂರು ಮತ್ತು ದಲಿತರಷ್ಟು ಗಾಯಗೊಂಡಿರುವವರು ಮತ್ತೊಬ್ಬರಿಲ್ಲ! ಆದರೂ 20ನೇ ಶತಮಾನದಲ್ಲಿ ದೆಹಲಿಯಲ್ಲಿ ವಾಸಿಸುತ್ತಿದ್ದ ದಾಗ್ ಎನ್ನುವ ಉರ್ದು ಕವಿ ಉದಾರವಾಗಿ ಹೇಳಿದ 'ಹಿಂದೂಗಳು ಮುಸಲ್ಮಾನರನ್ನು ದ್ವೇಷಿಸುವುದಿಲ್ಲ. ಇದು ದಕ್ಕನಿನ ಜನರ ಸೌಜನ್ಯ'.

ಕನ್ನಡ ಸಂಸ್ಕೃತಿ, ಕನ್ನಡ ಸಾಹಿತ್ಯ, ಕನ್ನಡ ಪರಂಪರೆ ಎನ್ನುವುದು ಕನ್ನಡ ಭಾಷಿಕರಿಂದ ಬೆಳೆದು ನಿಂತಿರುವುದು ಎಷ್ಟು ಸತ್ಯವೋ ಹಾಗೆಯೇ ಕನ್ನಡೇತರ ಸಂಸ್ಕೃತಿಗಳಿಂದಲೂ ಅದು ಪಡೆದುಕೊಂಡಿದೆ. ಈ ನೆಲದ ಬಹುತ್ವದ ಸಾರವನ್ನು ಒಳಗೊಂಡು ಜಗತ್ತಿನೆದುರು 'ವಿಶ್ವಮಾನವ ತತ್ತ್ವವಾಗಿ' ನಿಂತಿದೆ. ಅತಾರ್ಕಿಕ ದ್ವೇಷದಿಂದ ಮಾತ್ರ ಬಾನು ಮಷ್ತಾಕ್ ಅವರನ್ನು ವಿರೋಧಿಸುತ್ತಿರುವ ಅಸಹಿಷ್ಣುತಾವಾದಿಗಳು ಕನ್ನಡ ಪರಂಪರೆಯನ್ನು ಒಮ್ಮೆ ತಮ್ಮ ಹೃದಯದ ಸಮೀಪಕ್ಕೆ ತಂದುಕೊಂಡು ನೋಡಲಿ, ಮಧ್ಯಕಾಲೀನ ಕನ್ನಡ ಸಾಹಿತ್ಯ ಪರಂಪರೆಯನ್ನು ಉಜ್ವಲವಾಗಿ ಬೆಳಗಿದವರು ಉನ್ನತ ತತ್ತ್ವಸಾಧಕರು. ಶಿಶುನಾಳ ಶರೀಫರು, ಸಾವಳಗಿ ಮಹಮ್ಮದ ಸಾಹೇಬ, ಕೊಳ್ಳೂರು ಹಸನಾ ಸಾಹೇಬ, ಮೋಟ್ನಹಳ್ಳಿ ಹಸನ ಸಾಹೇಬ ಇವರ ಜೊತೆಗೆ ನೂರಾರು ಅಜ್ಞಾತ ತತ್ತ್ವಸಾಧಕರನ್ನು ಹೆಸರಿಸಬಹುದು. ಇವರೆಲ್ಲಾ ತಮ್ಮ ಕಾಲಕ್ಕೆ ಘನತೆಯನ್ನು ತಂದುಕೊಟ್ಟವರು. ಇವರ ಕಾಲದಲ್ಲಿ ಸಮಾಜ ಯಾವುದೇ ಕೆಡುಕು ಮತ್ತು ಅಸಹಿಷ್ಣುತೆಯ ಕಳಂಕವನ್ನು ತನ್ನ ಮೇಲೆ ಅಂಟಿಸಿಕೊಂಡಿರಲಿಲ್ಲ! ಇಂತಹ ಸಂತರ ನಡವಳಿಕೆ ಮತ್ತು ಕೃತಿಗಳು ಬಹುತ್ವದ ಹಣತೆಯಿಂದ ಹೊಮ್ಮುವ ಬೆಳಕಿನ ಕಿರಣಗಳಂತಿದ್ದವು. ನಾವು ಅನುಸರಿಸಬೇಕಾದ್ದು ಕನ್ನಡ ಪರಂಪರೆ ತೋರಿಸಿಕೊಟ್ಟ ಈ ಸಂಪ್ರದಾಯವನ್ನೇ ಹೊರತು, ಅನ್ಯಮತ ದ್ವೇಷ, ಅಸಹಿಷ್ಣುತೆ ತಿರಸ್ಕಾರಗಳಂತಹ ದುಷ್ಟ ವಿಚಾರಗಳನ್ನಲ್ಲ! ಸಂಶಯ ಮತ್ತು ಭಯಗ್ರಸ್ತ ಮನಸ್ಸು ಚಿಂತನೆ ಮತ್ತು ಸೃಜನಶೀಲ ಕಲೆಗಳನ್ನು ಕತ್ತಲೆಗೆ ಸರಿಸಲು ನಿರಂತರವಾಗಿ ಪ್ರಯತ್ನಿಸುತ್ತಲೇ ಇರುತ್ತದೆ.

ಇಷ್ಟಕ್ಕೂ ಬಾನು ಅವರು ಕನ್ನಡದ ಲೇಖಕಿ. ಕನ್ನಡದ ಮೂಲಕವೇ ಅವರು ತಮ್ಮ ಎದೆಯ ಹಣತೆಯನ್ನು ಬೆಳಗುತ್ತಿರುವುದು. ಕನ್ನಡ ಪರಂಪರೆಯ ಉದಾತ್ತ ಮಾನವತೆ, ಮತ್ತು ಸೋದರತೆಯ ಮೌಲ್ಯಗಳು ಅವರ ಕೃತಿಗಳ ಆಳದಲ್ಲಿ ಮಡುಗಟ್ಟಿವೆ. ಅವರ ಚಿಂತನೆಗಳ ಬೇರುಗಳನ್ನು ಗಟ್ಟಿಗೊಳಿಸಿರುವುದು ಕನ್ನಡ ಸಂಸ್ಕೃತಿ. ಈಗ ಬಾನು ಅವರ ಆಯ್ಕೆಯನ್ನು ವಿರೋಧಿಸುತ್ತಿರುವವರು ಈ ಸತ್ಯವನ್ನು ಮರೆಯಬಾರದು. 'ಹನುಮಾನ್ ಜಗತ್ತಿನ ಮೊದಲ ಗಗನಯಾಮಿ' ಎಂಬ ತಾರ್ಕಿಕವಲ್ಲದ ಮಾತುಗಳನ್ನು ಸಂದೇಹವಿಲ್ಲದೆ ನಂಬುವ ಮನಸ್ಥಿತಿಯವರು ಮಾನವತೆಯ ಪರವಾಗಿರುವ ಲೇಖಕರ ಮೇಲೆ ಎಸಗುತ್ತಿರುವ ಹಿಂಸೆಯ ಇನ್ನೊಂದು ವಿಧಾನವಷ್ಟೆ! ನಾವು ದುಷ್ಟರಿಗೆ ಅಂಜುವುದಕ್ಕಿಂತ ಮೂರ್ಖರಿಗೆ ಅಂಜಬೇಕಿದೆ. ದೇಶ ವಿಭಜನೆಯ ಕಾಲದಲ್ಲಿ ನಡೆದ ಭೀಕರ ಹಿಂಸೆಯನ್ನು ತನ್ನ ಕೃತಿಗಳಲ್ಲಿ ಎದೆ ಬಿರಿಯುವ ಹಾಗೆ ಹಿಡಿದಿಟ್ಟ ಮಾಂಟೋ ಎನ್ನುವ ಲೇಖಕನ ಕೃತಿಗಳಲ್ಲಿ ನಡೆಯುವ ಹಿಂಸೆಯನ್ನು ಇಂದಿನ ವಿವಾದಗಳು ಇನ್ನೊಂದು ವೇಷದಲ್ಲಿ ಜಾರಿಗೊಳಿಸುತ್ತಿರುವ ಘಟನೆಗಳಂತಿವೆ. ಭಾರತದಲ್ಲಿ ಆಯುಧಗಳ ಮೂಲಕ ನಡೆದ ಕೋಮು ಹಿಂಸೆಯ ಕರಾಳ ಚರಿತ್ರೆ ಒಂದು ಕಡೆಯಿದ್ದರೆ, ಆಯುಧಗಳ ಬಳಕೆಯೇ ಇಲ್ಲದೆ ದೇಹದಿಂದ ರಕ್ತ ಹರಿಸುವ ಹಿಂಸೆಯ ವಿಧಾನ ಇದು.

ಮಾನವ ಕಲ್ಪನೆಗೂ ನಿಲುಕದಂತಹ ಅಸಹಿಷ್ಣುತೆಯ ಮಾತುಗಳನ್ನು ಅವರು ಹೇಳುತ್ತಿದ್ದಾರೆ. ತಾವು ಏನು ಮಾಡುತ್ತಿದ್ದೇವೆ ಎಂಬುದರ ಸ್ಪಷ್ಟ ಅರಿವು ಅವರಿಗಿದೆ. ಮಾನವತೆಯ ಮೊದಲ ಮೆಟ್ಟಿಲನ್ನೂ ಹತ್ತಲಾರದಷ್ಟು ದುರ್ಬಲರಾಗಿರುವ ಅವರು ಹತಾಶರಾಗಿದ್ದಾರೆ. ಅಂತಿಮವಾಗಿ ಈ ನಿಂದನೆ ಜಾತ್ಯತೀತ, ಧರ್ಮ ನಿರಪೇಕ್ಷಿತ ಮಾನವತ್ವದ ಪರಂಪರೆಗಳ ವ್ಯಾಪ್ತಿಯನ್ನು ಕುಗ್ಗಿಸುತ್ತದೆ. ನಮ್ಮ ಕಾಲದ ಸಮಾಜ, ಸಂಸ್ಕೃತಿ ಮತ್ತು ಲೋಕಹಿತದ ಪರವಾಗಿರುವ ಕಲಾಪ್ರಕಾರಗಳು ಎದುರಿಸುತ್ತಿರುವ ತಣ್ಣನೆಯ ಕ್ರೌರ್ಯ ಇದು. ಸಾಮಾನ್ಯವಾಗಿ ಒಂದು ಸಿದ್ಧಾಂತಕ್ಕೆ ಒಪ್ಪಿಸಿಕೊಂಡಿರುವವರಿಗೇ ಏಕೆ ಬಾನು ಅವರ ಆಯ್ಕೆಯನ್ನು ವಿರೋಧಿಸುತ್ತಿದ್ದಾರೆ ಎಂದರೆ, ಅದು ಬಾನು ಅವರ ಸಾಹಿತ್ಯ ಕೃತಿಗಳ ಕಾರಣಕ್ಕಾಗಿ ಅಲ್ಲ! ಬದಲಿಗೆ ವಿರೋಧಿಸುವವರು ನಂಬಿರುವ 'ರಾಷ್ಟ್ರೀಯವಾದ'ವೂ ಇದಕ್ಕೆ ಕಾರಣವಿರಬಹುದು! ಇದು ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿಲ್ಲ. ಇಡೀ ಭಾರತದುದ್ದಗಲಕ್ಕೂ ಇದೇ ಬಗೆಯ ಹಿಂಸೆ ನಾನಾ ರೂಪಗಳಲ್ಲಿ, ನಾನಾ ಹೆಸರುಗಳಲ್ಲಿ ಮರುಕಳಿಸುತ್ತಿದೆ. ಜಾತ್ರೆಯಲ್ಲಿ 'ಮುಸ್ಲಿಂ ಸಮುದಾಯದವರು ಅಂಗಡಿಗಳನ್ನು ತೆರೆಯುವಂತಿಲ್ಲ', 'ಮುಸ್ಲಿಂರು ಆಚರಿಸುವ ಹಬ್ಬಗಳನ್ನು ಪಠ್ಯಪುಸ್ತಕಗಳಿಂದ ತೆಗೆಯಿರಿ' ಎನ್ನುವವರೆಗೂ ಈ ಹಿಂಸೆಯ ಕಿಡಿಗಳು ಹರಡಿಬಿಟ್ಟಿವೆ. ಇಂಥದ್ದರ ನಡುವೆಯೂ ಸರ್ವರಿಗೂ ಲೇಸನ್ನೇ ಬಯಸುವ ಕನ್ನಡ ಪರಂಪರೆಯ ಮನಸ್ಸು ದಸರಾ ಸಾಂಸ್ಕೃತಿಕ ಹಬ್ಬದ ಉದ್ಘಾಟನೆಗೆ ಬಾನು ಅವರನ್ನು ಆಹ್ವಾನಿಸಿ ತನ್ನ ಸರ್ವಧರ್ಮ ಬಾತೃತ್ವದ ಧ್ವಜವನ್ನು ಜಗತ್ತಿನೆದುರು ಎತ್ತಿಹಿಡಿದಿದೆ. ಎಷ್ಟೆಂದರೂ ಒಳಗಿನ ಸಾಮರಸ್ಯ ಮತ್ತು ಹೊರಗಿನ ದ್ವೇಷ ಮನಸ್ಥಿತಿ ಯಾವಾಗಲೂ ವಿರುದ್ಧ ದಿಕ್ಕಿನಲ್ಲಿರುತ್ತವೆ.

ಗಂಗಾವತಿಯ ಕನ್ನಡ ಮಾತೃಭಾಷೆಯ ರುಬಾಯಿ ಕವಿ ಜಜ್ಬ್ ಹೀಗೆ ಪ್ರಾರ್ಥಿಸಿದ್ದಾನೆ 'ಯಾರು ಏನೇನು ಬೇಡುತ್ತಾರೋ ಅವೆಲ್ಲವನ್ನೂ ಅವರಿಗೆ ಕೊಡು, ಆದರೆ ದೇವರೇ ನನಗೆ ಮಾತ್ರ ಮಾನವತ್ವವನ್ನು ದಯಪಾಲಿಸು'. ಈ ಕವಿಯ ಪರಂಪರೆಯನ್ನು ಮುಂದುವರೆಸಿ ಬಾನು ಅವರು ಹೇಳಿರುವ ಮಾತು 'ನನ್ನನ್ನು ವಿರೋಧಿಸಿ ನೀವು ಸಣ್ಣವರಾಗಬೇಡಿ'.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಸತ್ಯಕ್ಕೆ ಹೆದರುವವನು ಅಥವಾ ನಾಚುವವನು ನಿಜವಾದ ಜಿಜ್ಞಾಸುವಾಗಲಾರನು.

  —ಕುವೆಂಪು

- ಬಯಕೆ ಬದುಕಿನ ಅರ್ಧಾಂಗಿ; ಅನಾಸ್ಥೆ ಮರಣದ ಅರ್ಧಾಂಗ.

  —ಖಲೀಲ್ ಗಿಬ್ರಾನ್

- ಕೊಲುವ ಧರ್ಮವನೊಯ್ದು| ಒಲೆಯೊಳಗೆ ಇಕ್ಕುವ, ಕೊಲಲಾಗದೆಂಬ ಜೈನನ ಮತವೆನ್ನ| ತಲೆಯ ಮೇಲಿರಲಿ ಸರ್ವಜ್ಞ.

  —ಸರ್ವಜ್ಞ

- ಲೋಕವೆಲ್ಲಾ ಬಗ್ಗುವುದು ಶ್ರೇಷ್ಠವಾದ ಬುದ್ಧಿಗೆ ತಾನೇ?

  —ಬಿ.ಎಂ. ಶ್ರೀಕಂಠಯ್ಯ

- ನಾವು ಬಲಿಷ್ಠರಾಗಲು ಮೊದಲಿಗೆ ಆತ್ಮವಿಶ್ವಾಸವನ್ನು ಹೊಂದಿರಬೇಕು; ಇತರರನ್ನು ಅನುಕರಿಸಬಾರದು.

  —ಜೋಸೆಫ್ ಮ್ಯಾಝಿನಿ

- ಅಪ್ರಿಯವಾದರು ಸತ್ಯವನ್ನು ಹೇಳಬೇಕಾದುದು ಹಿತೈಷಿಯ ಧರ್ಮ.

  —ಅನಕೃ

- ಬುದ್ಧಿಯ ಜ್ಞಾನ ಬೇರೆ, ಹೃದಯದ ಜ್ಞಾನ ಬೇರೆ.

  —ಜಿ.ಪಿ. ರಾಜರತ್ನಂ